MR. SPEAKER.—You cannot speak from there. I request the Hon.Members to go to their places and put question. It is a small thing. You must be interested in your constituency and not in the language affair. I request the Hon Members to go back to their seats and put the question. If they insist, I will have to enforce the rule. This is my request.

(The hon.Members went back to their seats from the aisle.)

SRI KAGODU THIMMAPPA.—As far as the link road is concerned, definitely I will look into it. If there is a feasibility, we will take it up.

Accident in between Bangalore to Nelamagala National High Way.

360 SRI D. T. MAYANNA (Huliyurdurga)—Will the Minister for Public Works be pleassd to state·—

(a) the Nomber of accidents that took place on National Highway No. 4. in Karnataka between Bangalore and Nelamangala from 1975 to 1980 ;

(b) the loss incurred to people in respect of :

1. Loss of people.
2. Loss of animal.
3. Loss of properties.
4. Loss of vehicles (yearwise particulars may please be furnished) ;

(c) the estimated cost of expenditure to make this high way as double road for vehicular traffic from Bangalore to Nelamangala ;

(d) whether the Government have proposed to make this road as double road ?

SRI KAGODU THIMMAPPA (Minister for Public Works).—

(a) Total 615 accidents are occured.

(b) Loss incurred.

	1975	1976	1977	1978	1979	1980
1. Loss of People	8	15	18	26	32	26
2. Loss of animals	...	...	2	5	...	1
3. Loss (in rupees) Properties	12, 200,	21,050,	23,730,	30,175,	54,840,	63,910
4. Vehicles (year—wise particulars)	74	72	144	149	150	143

(c) The present Highway is already a double road. A sum of Rs. 50 435 lakhs has been estimated to strengthen this road.

(d) Does not arise in view of reply to (C) above.

ಶ್ರೀ ಡಿ. ಟಿ. ಮಾಯಣ್ಣ.—ಸ್ವಾಮಿ, ಕಳೆದ ೬ ವರ್ಷಗಳಲ್ಲಿ ಈ ರಾಷ್ಟ್ರೀಯ ಹೆದ್ದಾರಿಯಲ್ಲಿ ೧೦೦ಕ್ಕೂ ಹೆಚ್ಚು ಪ್ರಾಣಹಾನಿಯಾಗಿದೆ, ೨ ಲಕ್ಷಕ್ಕೂ ಹೆಚ್ಚು ಆಸ್ತಿಪಾಸ್ತಿಗಳ ನಷ್ಟವಾಗಿದೆ ಹಾಗೂ ನೂರಕ್ಕೂ ಹೆಚ್ಚು ವಾಹನಗಳು ಜಖಂ ಆಗಿವೆ. ಇದಕ್ಕೆ ಕಾರಣ ಈ ರಸ್ತೆಯಲ್ಲಿ ಕೈಗಾರಿಕೆಗಳು ಹೆಚ್ಚುತ್ತಿರುವುದು. ಇದರಜೊತೆಗೆ ಬೆಂಗಳೂರಿನಿಂದ ಮಂಗಳೂರಿಗೆ ಹೋಗತಕ್ಕಂಥ ವಾಹನಗಳು ಈ ರಸ್ತೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಸಂಚಾರ ಮಾಡುತ್ತಿರುವುದು. ಈ ದೃಷ್ಟಿಯಿಂದ ಈ ರಸ್ತೆಯನ್ನು ಜೋಡಿ ರಸ್ತೆಯನ್ನಾಗಿಮಾಡಲು ಕಾರ್ಯಕ್ರಮ ಹಾಕಿಕೊಂಡಿದ್ದೀರಾ?

ಶ್ರೀ ಕಾಗೋಡು ತಿಮ್ಮಪ್ಪ.—ಈಗಾಗಲೇ ನಾವು ಎರಡು ಲೈನ್ ಮಾಡಿದ್ದೇವೆ. ಇದನ್ನು ನಾಲ್ಕು ಲೈನ್ ರಸ್ತೆಯನ್ನಾಗಿ ಮಾಡಬೇಕೆಂದು ೨೧೦ ಲಕ್ಷ ರೂ.ಗಳಿಗೆ ಒಂದು ಅಂದಾಜು ತಯಾರು ಮಾಡಿದ್ದೇವೆ. ಇದಕ್ಕೆ ಕೇಂದ್ರ ಸರ್ಕಾರ ಹಣವನ್ನು ಮಂಜೂರು ಮಾಡಿಲ್ಲ. ಆದರೂ ಸಹ ನಾವು ಸುಮಾರು ೫ ಲಕ್ಷ ರೂ.ಗಳ ವೆಚ್ಚದಲ್ಲಿ ಇದನ್ನು ದುರಸ್ತಿ ಮಾಡುವ ಕೆಲಸ ಕೈಕೊಂಡಿದ್ದೇವೆ. ಈಗ ನೆಲಮಂಗಲದ ಹತ್ತಿರ ಬೈ-ಪಾಸ್ ರೋಡಿನ ಕೆಲಸ ನಡೆಯುತ್ತಿದೆ. ಒಟ್ಟಿನಲ್ಲಿ ತಾವು ರಸ್ತೆಯನ್ನು ಜೋಡಿ ರಸ್ತೆಯನ್ನಾಗಿ ಮಾಡಬೇಕೆಂದು ಏನು ಕೇಳಿದ್ದೀರಿ, ಅದನ್ನು ಗಮನದಲ್ಲಿಟ್ಟುಕೊಂಡೇ ಈ ಕೆಲಸ ಮಾಡುತ್ತಿದ್ದೇವೆ.

ಶ್ರೀ ಡಿ. ಟಿ. ಮಾಯಣ್ಣ.—ನಾನು ಪ್ರತ್ಯೇಕ್ಷವಾಗಿ ಎರಡು ರಸ್ತೆಗಳನ್ನು ನಿರ್ಮಾಣ ಮಾಡಬೇಕೆಂದು ಕೇಳುತ್ತಿರುವುದು.

ಶ್ರೀ ಕಾಗೋಡು ತಿಮ್ಮಪ್ಪ.—ಈ ರೀತಿ ಮಾಡಬೇಕೆಂಬ ದೃಷ್ಟಿಯಿಂದಲೇ ನಾವು ೨೧೦ ಲಕ್ಷ ರೂ.ಗಳ ಅಂದಾಜು ತಯಾರು ಮಾಡಿದ್ದೇವೆ. ಇದನ್ನು ಕೇಂದ್ರ ಸರ್ಕಾರ ಮಂಜೂರು ಮಾಡಿದರೆ ನಾವು ಖಂಡಿತವಾಗಿ ಈ ಕೆಲಸ ತೆಗೆದುಕೊಳ್ಳುತ್ತೇವೆ.

ಶ್ರೀ ಡಿ. ಟಿ. ಮಾಯಣ್ಣ.—ಈಗ ದೆಹಲಿಯಿಂದ ಫರಿದಾಬಾದ್‌ಗೆ ಬರತಕ್ಕವಾಗ ಜೋಡಿ ರಸ್ತೆ ಮಾಡಿದ್ದಾರೆ. ಈದೇ ರೀತಿ ಎಲ್ಲೆಲ್ಲಿ ಕೈಗಾರಿಕಾ ಕೇಂದ್ರಗಳು ಜಾಸ್ತಿ ಇವೆಯೋ ಅಲ್ಲೆಲ್ಲಾ ಜೋಡಿ ರಸ್ತೆಗಳನ್ನು ದೇಶದ ನಾನಾ ಭಾಗಗಳಲ್ಲಿ ಮಾಡಿರುವುದರಿಂದ, ಈ ನಾಲ್ಕನೇ ರಾಷ್ಟ್ರೀಯ ಹೆದ್ದಾರಿಯಲ್ಲಿಯೂ ಸಹ ಪ್ರತಿ ತಿಂಗಳು ಸಹ ಆಗುತ್ತಿರುವ ಆಕ್ಸಿಡೆಂಟುಗಳನ್ನು ತಡೆಗಟ್ಟಲು ಜೋಡಿ ರಸ್ತೆಯನ್ನು ನಿರ್ಮಾಣ ಮಾಡಲು ಕೇಂದ್ರ ಸರ್ಕಾರದ ಮನವೊಲಿಸಿ ತಕ್ಷಣವೇ ಕೆಲಸ ಪ್ರಾರಂಭ ಮಾಡುತ್ತೀರಾ ?

ಶ್ರೀ ಕಾಗೋಡು ತಿಮ್ಮಪ್ಪ.—ಸ್ವತಃ ನಾನು ಮತ್ತು ಚೀಫ್ ಇಂಜನಿಯರ್ ಅವರು ಅದನ್ನು ಪರಿಶೀಲನೆ ಮಾಡಿದ್ದೇವೆ. ಅಲ್ಲಿರತಕ್ಕಂಥ ಟ್ರಾಫಿಕ್‌ನ್ನು ಅವಾಯ್ಡ ಮಾಡುವುದಕ್ಕೆ ಬೇರೆ ವ್ಯವಸ್ಥೆ ಮಾಡಬೇಕೆಂಬ ಸೂಚನೆಯನೆ ಇದೆ. ಈಗ ಈ ರಸ್ತೆಯಲ್ಲಿ ನಡೆಯುತ್ತಿರುವ ಘಟನೆಗಳನ್ನು ಗಂಭೀರವಾಗಿ ಗಮನಿಸಬೇಕಾಗಿದೆ. ಈ ದೃಷ್ಟಿ ಇಟ್ಟುಕೊಂಡು ನಾವು ಇನ್ನೊಂದು ಸಲ ಕೇಂದ್ರ ಸರ್ಕಾರದ ಜೊತೆಯಲ್ಲಿ ಈ ಬಗ್ಗೆ ಸಮಾಲೋಚನೆ ಮಾಡಿ ಸಾಧ್ಯವಾದ ಮಟ್ಟಿಗೆ ಈ ಮಾರ್ಗವನ್ನು ಜೋಡಿ ರಸ್ತೆಯನ್ನಾಗಿ ಮಾಡಲು ಪ್ರಯತ್ನ ಮಾಡುತ್ತೇವೆ.

ಶ್ರೀ ಡಿ. ಟಿ. ಮಾಯಣ್ಣ.—ಈಗ ಪೀಣ್ಯಾ ಮತ್ತಿ ಅರಸಿನಕಂಟೆವರೆಗೆ ಮಾಡಿದ್ದಾರೆ ಇನ್ನು ಏನಿದ್ದರೂ ೮-೧೦ ಮೈಲುಗಳವರೆಗೆ ಮಾತ್ರ ಜೋಡಿ ರಸ್ತೆ ಕೆಲಸ ಆಗಬೇಕಾಗಿದೆ. ಆದಕಾರಣ ತಕ್ಷಣವೇ ಈ ಕೆಲಸ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ಇದನ್ನು ಜೋಡಿ ರಸ್ತೆಯನ್ನಾಗಿ ಮಾಡಬೇಕೆಂಬ ವಿಚಾರದಲ್ಲಿ ಭಿನ್ನಾಭಿಪ್ರಾಯವಿಲ್ಲ. ಇದೇ ಕಾರಣದಿಂದ ನಾವು ಕೇಂದ್ರ ಸರ್ಕಾರದಿಂದ ಹಣದ ಮಂಜೂರಾತಿ ಪಡೆಯುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಮಾನ್ಯ ಸದಸ್ಯರು ಈ ಬಗ್ಗೆ ಏನು ಕಳಚಳ ವ್ಯಕ್ತಪಡಿಸಿದ್ದಾರೆ, ಅದನ್ನು ಗಮನದಲ್ಲಿಟ್ಟುಕೊಂಡು ಮತ್ತು ಇದರ ಬಗ್ಗೆ ಅವರಿಗೆ ಎಷ್ಟು ಆಸಕ್ತಿ ಇದೆಯೋ ಅಷ್ಟೇ ಆಸಕ್ತಿಯನ್ನು ನಾವು ಸಹ ಇಟ್ಟುಕೊಂಡು ಕೆಲಸ ಮಾಡುತ್ತೇವೆ.

ಶ್ರೀ ಎಂ. ಚಂದ್ರಶೇಖರ್.—ಈಗ ಬೆಂಗಳೂರಿನಿಂದ ನೆಲಮಂಗಲದವರೆಗೆ ಮಾತ್ರವಲ್ಲ. ಬೆಂಗಳೂರಿನಿಂದ ತುಮಕೂರಿನವರೆಗೂ ಒತ್ತಡ ಜಾಸ್ತಿ ಇದೆ. ಆದಕಾರಣ ಈಗ ೨೦೦ ಕೋಟಿ ರೂ.ಗಳ ಅಂದಾಜು ಏನು ತಯಾರು ಮಾಡಿದ್ದೀರಿ, ಇದರ ಪ್ರಕಾರ ಬೆಂಗಳೂರಿನಿಂದ ನೆಲಮಂಗಲದವರೆಗೆ ಮಾತ್ರ ಜೋಡಿ ರಸ್ತೆ ನಿರ್ಮಾಣ ಮಾಡುತ್ತೀರೋ ಅಥವಾ ಬೆಂಗಳೂರಿನಿಂದ ತುಮಕೂರಿನವರೆಗೆ ಮಾಡುತ್ತೀರೋ ?

ಶ್ರೀ ಕಾಗೋಡು ತಿಮ್ಮಪ್ಪ.—ಹಿಂದೆ ಕೇಳಿದ್ದು ನೆಲಮಂಗಲದವರೆಗೆ. ತುಮಕೂರುವರೆಗೆ ಡಬಲ್‌ರೋಡ್ ಮಾಡಬೇಕು ಎನ್ನುವುದು ಸರ್ಕಾರದ ದೃಷ್ಟಿಯಲ್ಲಿದೆ. ಅದನ್ನು ದೃಷ್ಟಿಯಲ್ಲಿಟ್ಟು ಕೊಂಡು ಕೇಂದ್ರ ಸರ್ಕಾರದಲ್ಲಿ ಹಣ ಕೇಳುತ್ತೇವೆ ಎಂದು ಹೇಳಿದ್ದು

ಶ್ರೀ ಜಿ. ಬಸವಣ್ಣಪ್ಪ.—ಟ್ರಕ್ಸ್ ಮತ್ತು ಲಾರಿಗಳನ್ನು ರೋಡಿನಲ್ಲಿ ನಿಲ್ಲಿಸುವುದರಿಂದ ಅಕ್ಸಿಡೆಂಟ್ ಆಗುವುದಕ್ಕೆ ಕಾರಣ. ಆದುದರಿಂದ ಅವುಗಳನ್ನು ಪಾರ್ಕ್ ಮಾಡುವುದಕ್ಕೆ ಬೇರೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಕಾಗೋಡು ತಿಮ್ಮಪ್ಪ.—ಟ್ರಕ್ ಮತ್ತು ಲಾರಿಗಳು ರೋಡುಗಳ ಮಧ್ಯದಲ್ಲಿರುವುದರಿಂದ ಅನೇಕ ಅಪಘಾತಗಳು ಆಗುತ್ತದೆ. ಟ್ರಕ್‌ಗಳು ಮತ್ತು ವಾಹನಗಳನ್ನು ನಿಲ್ಲಿಸುವುದಕ್ಕೆ ಪಾರ್ಕ್ ಯಾರ್ಡ್ ಮಾಡಿ ಅಪಘಾತಗಳನ್ನು ತಪ್ಪಿಸಬೇಕು. ಇದಕ್ಕೂ ಕೇಂದ್ರ ಸರ್ಕಾರದವರು ಹಣ ಕೊಡುತ್ತಾರೆ. ಅವರಿಂದ ಹಣ ಪಡೆದು ಇದನ್ನು ಕಾರ್ಯಗತ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಡಿ. ಟಿ. ರಾಮು.—ಬೆಂಗಳೂರು ತುಮಕೂರು ರಸ್ತೆಯಲ್ಲಿ ಅಪಘಾತಗಳ ಸಂಖ್ಯೆ ಜಾಸ್ತಿಯಾಗಿದೆ. ಇದಕ್ಕೆ ಚಾಲಕರ ಅಲಕ್ಷ ಕಾರಣ ಎನ್ನುವುದು ನನ್ನ ಮನೋ ಭಾವನೆ. ಆದುದರಿಂದ ಬೆಂಗಳೂರು ಮತ್ತು ತುಮಕೂರು ಮಧ್ಯೆ ಸಂಚಾರಿ ಪೋಲೀಸ್ ಸ್ಕ್ವಾಡ್‌ನ್ನು ಶಾಶ್ವತವಾಗಿ ಇಡುತ್ತೀರಾ ?

ಶ್ರೀ ಕಾಗೋಡು ತಿಮ್ಮಪ್ಪ —ಅದನ್ನು ಪರಿಶೀಲನೆ ಮಾಡುತ್ತೇನೆ. ಟ್ರಾಫಿಕ್ ಕಂಟ್ರೋಲ್ ವ್ಯವಸ್ಥೆಯನ್ನು ಮಾಡಿದ್ದೆವು.

MR SPEAKER —The question hour is over.

QUESTIONS FOR ANSWERS ON THE DAY
(but not taken up)

Construction of District Stadiums.

381 SRI A. BASAVRAJ PATIL (Lingasugur) —Will the Minister of State for Information and Youth Services be pleased to state,—

(a) the expenditure incurred by Government for the construction of District Stadiums ;

(b) the time required to complete the construction of all Stadiums ?

(c) reasons for delay in executing the construction of these Stadiums ?

SRI K. GANGADHAR. (Minister of State for Information and Youth Services).—

(a) The Government of Karnataka has incurred an expenditure to the tune of Rs, 52.50 lakhs.